(ಮಾನ್ಯ ಸದಸ್ಯರಾದ ಎಂ. ಪಿ. ವೆಂಕಟೇಶ್‌ರವರು ಕೂಡ ಅವರನ್ನು ಅನುಕರಿಸಿದರು)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿ ಆಡಳಿತಾಧಿಕಾರಿ ಅವರ ಅಧಿಕಾರವಿದೆ. ಸರ್ಕಾರ ಈ ಬಗ್ಗೆ ಒಂದು ಸ್ಟೇಟ್ ಮೆಂಟ್ ಮಾಡಬೇಕಾಗುತ್ತದೆ. ಇದು ಬಹಳ ಗಂಭೀರವಾದ ಸಮಸ್ಯೆ ಇದೆ. ಅಲ್ಲಿ ಮರಾಠಿ ಬಾವುಟವಿದ್ದರೆ ಸರ್ಕಾರ ಈ ಬಗ್ಗೆ ಒಂದು ಸ್ಟೇಟ್ ಮೆಂಟ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ಉತ್ತರ ಹೇಳುತ್ತಿದ್ದಾರೆ. ತಾವು ಇಲ್ಲಿ ಏತಕ್ಕೆ ಕಾಳತಿದ್ದೀರಿ ? ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಮ್ಮ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಮಗೆ ಹೇಳಿಕೆ ಕೊಡಲಿಕ್ಕೆ ಅವಕಾಶ ಕೊಡಲಿಲ್ಲ. ನಾನು ತಮ್ಮ ಅಪ್ಪಣೆ ಪಡೆದು ಎದ್ದು ನಿಂತು ಸಪ್ಲಿಮೆಂಟರಿ ಉತ್ತರ ಕೊಡಬೇಕೆನ್ನುವಷ್ಟರಲ್ಲಿ ಮಾನ್ಯ ಸದಸ್ಯರು ಮಾತ ನಾಡುತ್ತಾ, ಮಾತನಾಡುತ್ತಾ ತಮ್ಮ ಪೀಠದ ಎದುರಿಗೆ ಬಂದು ಬಿಟ್ಟರು. ಈ ತರಹ ಪರಿಸ್ಥಿತಿ ಬಂದರೆ ಹೇಗೆ ?

(ಈ ಹಂತದಲ್ಲಿ ಧರಣಿ ಕುಳಿತ ಮಾನ್ಯ ಸದಸ್ಯರುಗಳು ತಮ್ಮ ಪೀಠಗಳಿಗೆ ವಾಪಸ್ಸಾದರು)

ಶ್ರೀ ಕೆ. ಪೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳಿಗಿಂತ ಕನ್ನಡದ ಬಗ್ಗೆ ಹೆಚ್ಚು ಅಭಿಮಾನವಿರುವ ಪಾಟಾಳ್ ನಾಗರಾಜ್ ಮತ್ತು ಪಾಟೀಲ್ ಪುಟ್ಟಪ್ಪನವರನ್ನು ಅಲ್ಲಿ ನಿಲ್ಲಿಸಿದರೆ ಅವರು ಮತ್ತು ಇತರೇ ಕನ್ನಡಿಗರು ಹೆಚ್ಚು ಸಂಖ್ಯೆಯಲ್ಲಿ ಆರಿಸಿ ಬರುವ ಸಂಭವವಿದೆ. ಆ ಕೆಲಸವನ್ನು ಮಾಡಬೇಕೆಂದು ಮಾನ್ಯ ಮೊಯಿಲಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದ ಪಾಟಾಳ್ ನಾಗರಾಜ್‌ರವರು ಕನ್ನಡದ ಬಗ್ಗೆ ಹೋರಾಟ ಮಾಡಿದವರು, ಹೋಚಳುವಳಿ ಮಾಡಿದವರು. ಕನ್ನಡದ ಧ್ವಜವನ್ನು ಯಾವಾಗಲೂ ಕೂಡ ಎತ್ತರಕ್ಕೆ ಹಾರಿಸಬೇಕೆಂದು ಹೇಳಿ ಮನಸ್ಸು ಮಾಡಿದವರು. ಇದರ ಬಗ್ಗೆ ನಮಗೆ ಏನೂ ಇಲ್ಲ. ಪ್ರಶ್ನೆ ಇಲ್ಲಿ ಸೀಮಿತವಾಗಿ ಉಳಿದಿದೆ. ಚುನಾವಣಾ ವಿಚಾರ, ಚುನಾವಣೆ ಪ್ರಕ್ರಿಯೆ ಬಿಡುಗಡೆಯಾಗಿದೆ. ಚುನಾವಣೆಯನ್ನು ನಿಲ್ಲಿಸತಕ್ಕಂಥ ಪ್ರಶ್ನೆ ನಾವು ಮಾಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ನಾನು ನಿನ್ನೆ ಈ ವಿಚಾರವನ್ನು ಹೇಳಿದೆ. ಬಹುಶಃ ತಾವು ನೆನಪು ಮಾಡಿಕೊಳ್ಳಬೇಕು. ನಾನು ಸ್ಪಷ್ಟವಾಗಿ ಹೇಳಿದೆ ಈಗ ಒಂದು ವೇಳೆ...

ಶ್ರೀ ಪಾಟಾಳ್ ನಾಗರಾಜ್.—ಬೆಳಗಾವಿ ನಗರಸಭೆಯಲ್ಲಿ ಕನ್ನಡದ ವಿರೋಧಿಯಾಗಿ ವರ್ತಿಸುತ್ತಿದ್ದಾರೆ, ಹೀಗಾದರೆ ನಾವು ಬಹಳ ತೊಂದರೆಗೆ ಸಿಕ್ಕುತ್ತೇವೆ. ಇಲ್ಲದಿದ್ದರೆ ನಾವು ನಮ್ಮ ಹಿತ ಕಾಪಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿಂತುಕೊಂಡಾಗ ನಾನು ನಿಲ್ಲುವುದಕ್ಕೆ ತಯಾರಿಲ್ಲ. ಈ ಸೌಜನ್ಯತೆಯನ್ನು ನಾನು ಕಾಪಾಡಿಕೊಂಡು ಹೋಗುತ್ತೇನೆ. ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಚುನಾವಣೆ ವಿಚಾರ ಬಂದಾಗ ಇಲ್ಲಿ ನಿನ್ನೆ ನಾನು ಪ್ರಸ್ತಾಪ ಮಾಡಿದ್ದೆ. ಎಲ್ಲರೂ, ಇಡೀ ಸದನ ಆ ಕಡೆಯವರು ಈ ಕಡೆಯವರು ಒಂದು ವಿಚಾರಕ್ಕೆ ರಾಜಕೀಯ ಮಾಡುವುದು, ಮತ್ತೊಂದು ವಿಚಾರಕ್ಕೆ ಜೇಡ ಏನ್ನುವುದು. ಈ ರೀತಿ ಭೇದ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿ ಡಿಲಿಮಿಟೇಶನ್ ಮಾಡಬೇಕೆಂದು ಎಲ್ಲರ ಅಭಿಪ್ರಾಯ ಆಗಿದ್ದರೆ ನಾವು ಚುನಾವಣೆ ಮುಂದಕ್ಕೆ ಹಾಕಬೇಕೆಂದು ಆಗಿದ್ದರೆ ಸರ್ಕಾರ ಅದಕ್ಕೆ ತಲೆಯಾಗುತ್ತದೆ. ಆದರೆ ಒಂದು ಕಾರ್ಪೊರೇಷನ್‌ಗೆ ಒಂದು ತರಹ ಮತ್ತೆ ಇನ್ನೊಂದು ಕಾರ್ಪೊರೇಷನ್‌ಗೆ ಇನ್ನೊಂದು ತರಹ ಟ್ರೀಟ್‌ಮೆಂಟ್ ಕೊಟ್ಟರೆ ತಮಗೆ ಗೊತ್ತಿದೆ, ನಮ್ಮ ಹಸ್ತಿರದಲ್ಲೇ ಕೆಂಪು ಕಟ್ಟಡ ಇದೆ. ಆಮೇಲೆ ನಮ್ಮ ಮುಂದಕ್ಕೆ ಮಂಗಳಾರತಿ ಆಗತಕ್ಕಂಥ ಪರಿಸ್ಥಿತಿ ಬರುತ್ತದೆ. ಕಾನೂನಿನಲ್ಲಿ ಈ ರೀತಿ ಮಾತನಾಡುವುದಕ್ಕೆ ಆಗುವುದಿಲ್ಲ. We cannot distinguish between one Corporation and another. ಏಕೆಂದರೆ ಅಲ್ಲಿ ಮರಾಠಿಗರು ಬರುತ್ತಾರೆ. ಆದ್ದರಿಂದ ಅಲ್ಲಿ ಚುನಾವಣೆ ಮಾಡಬೇಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇಲ್ಲಿ ಕನ್ನಡಿಗರು ಬರುತ್ತಾರೆ, ಇಲ್ಲಿ ಚುನಾವಣೆ ಮಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ತಮ್ಮ ಆದೇಶಕ್ಕೆ ಬಿಟ್ಟಿದ್ದೇನೆ. ಈ ಅಂಶವನ್ನು ವಿಚಾರ ಮಾಡುವುದಕ್ಕೆ ಬರುವುದಿಲ್ಲ. ಇನ್ನು ಎರಡನೆಯದಾಗಿ, ಬೆಳಗಾವಿ ಹಿತದೃಷ್ಟಿಯಿಂದ ಎಲ್ಲಾ ಚುನಾವಣೆಗಳನ್ನು